ದಿನಾಂಕಃ **28.01.2019** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ 1ನೇ ಎದುರುದಾರರ ಪರ ಶ್ರೀ ಆರ್.ಎ.ಕೆ. ರವರಿಂದ ಃ

ನಾನು ಬೂತ್ ನಂ.36 ರಲ್ಲಿ ಮತ ಎಣಿಕೆ ಏಜೆಂಟಾಗಿ ಹೋಗಿದ್ದೆ. ಯಾರಿಗೆ ಎಷ್ಟೆಷ್ಟು ಮತಗಳು ೞಬಂದಿದ್ದವು ಎಂದು ನಮಗೆ ತೋರಿಸಿದ್ದರು ಎಂದರೆ ಸರಿ. ಸಾಕ್ಷಿಯು ಸ್ವತಃ ಹೇಳುತ್ತಾರೆ ಆ ರೀತಿ ತೋರಿಸಿದಾಗ ಅರ್ಜಿದಾರರಿಗೆ 388 ಮತಗಳು, 1ನೇ ಎದುರುದಾರರಿಗೆ 365 ಮತಗಳು ಬಂದಿದ್ದವು. ನಿಪಿ.3 ನ್ನು ಭರ್ತಿ ಮಾಡಿದ ನಂತರ ಓದಿ ತಿಳಿದುಕೊಂಡ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮತ ಎಣಿಕೆ ಪ್ರಾರಂಭಿಸುವ ಮೊದಲೆ ಅಂದರೆ ಮತ ಯಂತ್ರವನ್ನು ತೆರೆಯುವ ಮುನ್ನ ನಿಪಿ.3 ಕ್ಕೆ ನಮ್ಮ ಸಹಿ ಪಡೆದಿದ್ದಾರೆ. ಮತ ಯಂತ್ರ ತೆರೆಯುವ ಮುನ್ನ ಒಂದು ಫಾರಂ ಗೆ, ಮತ ಎಣಿಕೆ ಮುಗಿದ ನಂತರ ಮತ್ತೊಂದು ಪಾಾರಂ ಸಹಿ ಪಡೆಯುತ್ತಾರೆ ಎಂದರ ಸಾಕ್ಷಿ ನಮ್ಮ ಬಳಿ ಒಂದೇ ಫಾರಂಗೆ ಸಹಿ ಪಡೆದಿದ್ದಾರೆ ಎಂದು ಹೇಳುತ್ತಾರೆ. ಮತ ಎಣಿಕೆ ಕಾರ್ಯ ಮುಗಿದ ನಂತರ ಫಲಿತಾಂಶ ಪ್ರಕಟಿಸಿರುತ್ತಾರೆ ಎಂದರೆ ಸಾಕ್ಷಿಯು ಮುಗಿದಾಗ ಮೌಖಿಕವಾಗಿ ಅರ್ಜಿದಾರರು 532 ಮತಗಳನ್ನು ಪಡೆದು ಗೆದ್ದಿದ್ದಾರೆ ಎಂದು ಹೇಳಿದರು. ಆದರೆ, 1ನೇ ಎದುರುದಾರರಿಗೆ 520 ಮತಗಳನ್ನು ದಾಖಲಿಸುವ ಬದಲಾಗಿ 532 ಮತಗಳನ್ನು ದಾಖಲಿಸಿ ಅವರೇ ಗೆದ್ದಿದ್ದಾರೆಂದು ಘೋಷಿಸಿದರು. ಅರ್ಜಿದಾರರಿಗೆ ಎಷ್ಟು ಮತಗಳು ಬಂದಿತ್ತೋ ಅಷ್ಟೇ ಮತಗಳನ್ನು ನಿಪಿ.3 ಮತ್ತು 4 ರಲ್ಲಿ ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮತಗಳನ್ನು ತಪ್ಪಾಗಿ ನಮೂದಿಸಿದ್ದಾರೆಂದು ಫಲಿಂತಾಶ ಘೋಷಣೆ ಮಾಡಿದ ತಕ್ಷಣ ಗೊತ್ತಾಗಿರುತ್ತದೆ. 15 ನಿಮಿಷಗಳಲ್ಲಿ ನಾವು ಚುನಾವಣಾಧಿಕಾರಿಗೆ ಪ್ರಶ್ನಿಸಿದಾಗ ಅವರು ಮತಯಂತ್ರಗಳನ್ನು ಸೀಲ್ ಮಾಡಲಾಗಿದೆ ಜಿಲ್ಲಾಧಿಕಾರಿಗಳಿಗೆ ದೂರು ಮಾಡಿ ಎಂದು ಹೇಳಿದರು. ಬೂತ್ ಸಂಖ್ಯೆಃ 36 ರಲಸ್ಲಿ ಅರ್ಜಿದಾರರಿಗೆ ಕೆಲವ 365 ಮತಗಳು ಮಾತ್ರ ಬಂದಿರುತ್ತವೆ ಎಂದರೆ ಸರಿಯಲ್ಲ. 388 ಮತಗಳು ಬಂದಿರುತ್ತವೆ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಡಿ.ಜಿ.ಪಿ. ರವರಿಂದ ಃ

ಬೂತ್ ಸಂಖ್ಯೆಃ 36 ರ ಮತ ಎಣಿಕೆ ಕಾರ್ಯಕ್ರಮಕ್ಕೆ ನಾನು ಅರ್ಜಿದಾರರ ಪರವಾಗಿ ಮತ ಎಣಿಕೆ ಏಜೆಂಟಾಗಿ ಹೋಗಿದ್ದೆ. ನಿಪಿ.10 ರಲ್ಲಿ ಬೂತ್ ಸಂಖ್ಯೆಃ 36 ಎಂದು ನಮಾದಿಸಿಲ್ಲ ಎಂದರೆ ಸರಿ. ವಾರ್ಡ್ ಸಂಖ್ಯೆ 18 ಎಂದು ಮಾತ್ರ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ವಾರ್ಡ್ ಸಂಖ್ಯೆಃ 18 ರಲ್ಲಿಯೋ ಬೂತ್ ಸಂಖ್ಯೆಃ 36 ಬರುತ್ತದೆ ಎಂದು ಹೇಳುತ್ತಾರೆ. ಮತಎಣಿಕೆ ಸಂದರ್ಭದಲ್ಲಿ ಯಾರಿಗೆ ಎಷ್ಟೆಷ್ಟು ಮತಗಳು ಬಂದಿರುತ್ತವೆ ಎಂದು ನಮಗೆ ತೋರಿಸಿರುತ್ತಾರೆ ಎಂದರೆ ಸರಿ. ನಂತರ ನಾವು ಆಚೆ ಬಂದ ನಂತರ ಅರ್ಜಿದಾರರ ಹೆಸರಿಗೆ ಕಡಿಮೆ ಮತಗಳನ್ನು ನಮೂದಿಸಿ 1ನೇ ಎದುರುದಾರರು ಗೆದ್ದಿದ್ದಾರೆಂದು ಘೋಷಿಸಿದರು. ನಿಪಿ.3 ರಲ್ಲಿರುವ ಸಹಿ ನಮ್ಮದು. ಫಲಿತಾಂಶ ಘೋಷಣೆ ಮಾಡಿದ ತಕ್ಷಣ ಚುನಾವಣಾಧಿಕಾರಿಗಳಿಗೆ ಮೌಖಿಕವಾಗಿ ದೂರು ನೀಡಿದ್ದೇವೆ. ಅವರು ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸುವಂತೆ ಹೇಳಿದರು. 1ನೇ ಎದುರುದಾರರಿಗೆ ಬೂತ್ ಸಂಖ್ಯೆಃ 36 ರಲ್ಲಿ 388 ಮತಗಳು ಬಂದಿವೆ ಎಂದರೆ ಸರಿಯಲ್ಲ. ಅವರಿಗೆ ಕೇವಲ 365 ಮತಗಳು ಬಂದಿದ್ದವು. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿಜೆಎಂ., ಚಾಮರಾಜನಗರ.